# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 222 |
| ಸದಸ್ಯರ ಹೆಸರು | ಡಾ.ಎಂ.ಜಿ ಮುಳೆ |
| ಉತ್ತರಿಸುವ ದಿನಾಂಕ | 28.01.2026 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಪ್ರಸಿದ್ಧ ಝರಣಿ ನರಸಿಂಹ ಸ್ವಾಮಿ ದೇವಾಲಯಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದರೂ, ಅಲ್ಲಿನ ಗುಹೆಯೊಳಗೆ ನೀರು ಹೊರಹಾಕುವ ಮತ್ತು ಶುಚಿತ್ವ ಕಾಪಾಡುವ ವ್ಯವಸ್ಥೆ ಸಮರ್ಪಕವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬೀದರ್ ನಗರದ ಶ್ರೀ ಕ್ಷೇತ್ರ ಝರಣಿ ನರಸಿಂಹ ದೇವಸ್ಥಾನದ ಗುಹೆಯೊಳಗಿನ ನೀರು ನೈಸರ್ಗಿಕವಾಗಿ ಹರಿದು ಬರುತ್ತಿರುವುದರಿಂದ, ಈ ನೀರು ಗೋಮುಖ ಮುಖಾಂತರ ಹೊರಹೋಗುತ್ತಿದೆ ಮತ್ತು ಗುಹೆಯೊಳಗೆ ಶುಚಿತ್ವ ಕಾಪಾಡುವ ಸಲುವಾಗಿ ಭಕ್ತರಿಗೆ ತೆಂಗು, ಹೂ, ಕರ್ಪೂರ ಇತರೆ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿರುತ್ತದೆ. ಪ್ರತಿದಿನ ಗುಹೆಯೊಳಗೆ ಹೊಸ ನೀರು ಬರುತ್ತಿರುವುದರಿಂದ ಶುಚಿತ್ವ ಕಾಪಾಡಲು ಕ್ರಮ ಕೈಗೊಳ್ಳಲಾಗಿದೆ. |
| ಆ) | ಈ ದೇವಾಲಯವನ್ನು 'ಬೃಹತ್ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಮುಜರಾಯಿ ಇಲಾಖೆಯಿಂದ ಮೀಸಲಿಟ್ಟಿರುವ ಅನುದಾನ ಎಷ್ಟು? | ಬೀದರ್ ನಗರದ ಶ್ರೀ ಕ್ಷೇತ್ರ ಝರಣಿ ನರಸಿಂಹ ದೇವಸ್ಥಾನವು ಬೃಹತ್ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ದೇವಸ್ಥನದ (ನೀಲಿ ನಕ್ಷೆ) ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗಿದ್ದು, ಅದರಂತೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ದೇವಸ್ಥಾನ ಆವರಣದಲ್ಲಿ ಬೃಹದಾಕಾರದ ಮೇಲ್ಛಾವಣಿ, ಬಟ್ಟೆ ಬದಲಾಯಿಸುವ ಕೋಣೆ, ಶೌಚಾಲಯಗಳು, ಯಾತ್ರಿ ನಿವಾಸ ಹಾಗೂ ಮೆಟ್ಟಿಲುಗಳ ಛಾವಣಿ ಇತರೆ ಕಾಮಗಾರಿ ಕೈಗೊಳ್ಳಲಾಗಿದೆ ಹಾಗೂ ದೇವಾಲಯದ ನಿಧಿಯಿಂದ ನೂತನ ಕಛೇರಿ ಕಟ್ಟಡ, ಅಡುಗೆ ಶೆಡ್, |

| ಪ್ರಶ್ನೆ | | ಉತ್ತರ |
|---|---|---|
| | | ಶೌಚಾಲಯಗಳು, ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ, ತಂತಿ ಬೇಲಿ ನಿರ್ಮಾಣ, ಚಕ್ ಡ್ಯಾಂ, ಆರ್.ಓ.ಪ್ಲಾಂಟ್, ಓವರ್‌ಹೆಡ್ ಟ್ಯಾಂಕ್, ಟೈಲ್ಸ್ ಅಳವಡಿಸುವುದು, ಸಿ.ಸಿ.ಟಿ.ವಿ., ಬೀದಿ ದೀಪ, ಸೋಲಾರ್ ದೀಪ ಇತ್ಯಾದಿ ಕಾಮಗಾರಿ ಕೈಗೊಳ್ಳಲಾಗಿದೆ. ಬೀದರ್ ನಗರದ ಶ್ರೀ ಕ್ಷೇತ್ರ ಝರಣಿ ನರಸಿಂಹ ದೇವಸ್ಥಾನದ ಪ್ರವರ್ಗ "ಎ" ದೇವಸ್ಥಾನಯಾಗಿದ್ದು, ಪ್ರತಿ ವರ್ಷ ಸಮಾರು ರೂ.2.00 ಕೋಟಿ ಆದಾಯ ಇದ್ದು, ಸದರಿ ಆದಾಯದಲ್ಲಿ ಮಾಸ್ಟರ್ ಪ್ಲಾನ್ ಅನ್ವಯ ಹಂತಹಂತವಾಗಿ ಕಾಮಗಾರಿಗಳು ಕೈಗೊಳ್ಳಲಾಗುತ್ತಿರುತ್ತದೆ. |

ಸಂಖ್ಯೆ: ಕಂಇ 10 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.